		ಓಲ್ಡ್ ಗೋವಾ.	
29.	ಉತ್ತರ ಕನ್ನಡ	1. ಕೋರಲ್ ಡಿಸ್ಟಿಲರೀಸ್, ಗೋವಾ.	

<u>ಕರ್ನಾಟಕ ವಿಧಾನ ಸಭೆ</u>

378 ಶ್ರೀ ಗೋಪಾಲ ಭಂಡಾರಿ. ಹೆಚ್ (ಕಾರ್ಕಳ)

ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳ ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು

ಅ) ರಾಜ್ಯದಲ್ಲಿರುವ ಪುರಸಭೆ ಮತ್ತು ನಗರಸಭೆಗಳಿಗೆ ಸರ್ಕಾರದಿಂದ ಕಳೆದ ಆರ್ಥಿಕ ವರ್ಷದಲ್ಲಿ ಯಾವ ಯಾವ ಮೂಲಗಳಿಂದ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ;

ಕಳೆದ ಆರ್ಥಿಕ ವರ್ಷದಲ್ಲಿ ರಾಜ್ಯ ಹಣಕಾಸು ಆಯೋಗ ಹಾಗೂ ಕೇಂದ್ರದ 12ನೇ ಹಣಕಾಸು ಆಯೋಗದಿಂದ ಈ ಕೆಳಗಿನಂತೆ ಬಿಡುಗಡೆಗೊಳಿಸಿದೆ.

(ರೂ. ಲಕ್ಷಗಳಲ್ಲಿ)

ವಿವರ	ನಗರಸಭೆಗಳಿಗೆ	ಪುರಸಭೆಗಳಿಗೆ
ಎಸ್ಎಫ್ಸಿ	33637.01	37007.47
12ನೇ ಹಣಕಾಸು	3631.49	2671.18
ಎಸ್ಜೆಎಸ್ಆರ್ವೈ	1384.15	1399.62
ಯುಐಡಿಎಸ್ಎಸ್ಎಂಟಿ	8798.63	5160.46

ಆ) ಈ ಆರ್ಥಿಕ ವರ್ಷದಲ್ಲಿ ಎಷ್ಟೆಷ್ಟು ಹಣ, ಯಾವ ಯಾವ ಪುರಸಭೆ ಮತ್ತು ನಗರಸಭೆಗಳಿಗೆ ವಿತರಿಸಲು ಆದೇಶ ಮಾಡಲಾಗಿದೆ;

2009–10ನೇ ಸಾಲಿನಲ್ಲಿ ರಾಜ್ಯ ಹಣಕಾಸು ಆಯೋಗದಿಂದ ಪುರಸಭೆ ಮತ್ತು ನಗರಸಭೆಗಳಿಗೆ ವಿತರಿಸಲು ಈ ಕೆಳಗಿನಂತೆ ಸರ್ಕಾರದ ಆದೇಶ ಸಂಖ್ಯೆ ನಅಇ 16:ಎಸ್ಎಫ್ಸಿ 2009 ಬೆಂಗಳೂರು, ದಿನಾಂಕ:06.07.2009 ರಲ್ಲಿ ನಿಗಧಿ ಪಡಿಸಿದೆ.(ಲಗತ್ತಿಸಿದೆ)(ಅ)

1) ನಗರ ಸಭೆಗಳಿಗೆ ರೂ.46215.48 ಲಕ್ಷ

2) ಪುರ ಸಭೆಗಳಿಗೆ ರೂ.42444.27 ಲಕ್ಷ

ಇ) ಪುರಸಭೆ ಮತ್ತು ನಗರಸಭೆಗಳಿಗೆ ವಿಶೇಷ ಅನುದಾನವನ್ನು ಯಾವ ಯಾವ ಕಡೆಗಳಿಗೆ ಒದಗಿಸಲಾಗಿದೆ;

ಪುರಸಭೆ ನಗರಸಭೆಗಳಿಗೆ 2008–09ನೇ ಸಾಲಿನಲ್ಲಿ ಬಿಡುಗಡೆ ಮಾಡಲಾದ ವಿಶೇಷ ಅನುದಾನದ ವಿವರ ಅನುಬಂಧ–(ಆ)ನಲ್ಲಿ ಒದಗಿಸಲಾಗಿದೆ. 2009–10ನೇ ಸಾಲಿನಲ್ಲಿ ವಿಶೇಷ ಅನುದಾನ ಬಿಡುಗಡೆ ಮಾಡುವ ಬಗ್ಗೆ ಇನ್ನು ತೀರ್ಮಾನ ತೆಗೆದುಕೊಳ್ಳಬೇಕಿದೆ.

ಈ) ವಿಶೇಷ ಅನುದಾನ ಒದಗಿಸಲು ಯಾವ ಮಾರ್ಗಸೂಚಿಯನ್ನು ಅನುಸರಿಸಲಾಗುವುದು?

ಸರ್ಕಾರದ ಮಟ್ಟದಲ್ಲಿ ನಿರ್ಣಯ ಕೈಗೊಂಡು ಬಿಡುಗಡೆ ಗೊಳಿಸಲಾಗುತ್ತಿದೆ.

ನಇ 19 ಎಸ್.ಎಫ್.ಸಿ 2009

ಮಾನ್ಯ ಪೌರಾಡಳಿತ ಸ್ಥಳೀಯ ಸಂಸ್ಥೆಗಳು
ಹಾಗೂ ಸಾರ್ವಜನಿಕ ಉದ್ಯಮಗಳ ಸಚಿವರು

ಅನುಬಂಧ–ಅ

ವಿಷಯ:– ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ 2009–10ನೇ ಸಾಲಿನ ಎಸ್.ಎಫ್.ಸಿ ಅನುದಾನದ ಅಡಿಯಲ್ಲಿ ನಿಗದಿಪಡಿಸಲಾದ ಅನುದಾನದ ವಿವರಗಳು – ಆದೇಶ.

ಓದಲಾಗಿದೆ:– ಸರ್ಕಾರದ ಆದೇಶ ಸಂಖ್ಯೆ:ನಅಇ 121 ಎಸ್.ಎಫ್.ಸಿ 2005, ದಿನಾಂಕ:12–04–2006.

ಪ್ರಸ್ತಾವನೆ:–

ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಗೆ ಎಸ್.ಎಫ್.ಸಿ ಅನುದಾನದ ಅಡಿಯಲ್ಲಿ ಬಿಡುಗಡೆ ಮಾಡಲಾಗುವ ವಿವಿಧ ಅನುದಾನಗಳ ಬಗ್ಗೆ ಮೇಲೆ ಓದಲಾದ ಸರ್ಕಾರದ ಆದೇಶದಲ್ಲಿ ಹಂಚಿಕಾ ಸೂತ್ರವನ್ನು ಹೊರಡಿಸಲಾಗಿದೆ. 2009–10ನೇ ಸಾಲಿನ ಆಯವ್ಯಯದಲ್ಲಿ ಎಸ್.ಎಫ್.ಸಿ ಅಡಿಯಲ್ಲಿ ಒಟ್ಟು ರೂ.241968.00 ಲಕ್ಷಗಳ ಅನುದಾನವನ್ನು ಒದಗಿಸಲಾಗಿದೆ. ಈ ಅನುದಾನದ ಪೈಕಿ ಹಂಚಿಕಾ ಸೂತ್ರದ ಅನುಸಾರ 1)ಸಮಗ್ರ ಮಟ್ಟದ ರಕ್ಷಣೆ (Global level protection 2)ಸಮಗ್ರ ಮಟ್ಟದ ಒದಗಿಸುವಿಕೆ (Global level provisioning) ಮತ್ತು 3) ಮುಕ್ತ ನಿಧಿ (Untied grant) ಬಾಬ್ತುಗಳಿಗಾಗಿ ಅನುದಾನವನ್ನು ನಿಗಧಿಪಡಿಸುವ ಅವಶ್ಯಕತೆ ಇರುತ್ತದೆ. ಅದರಂತೆ ವಿವಿಧ ಉದೇಶಗಳಿಗೆ ಅನುದಾನವನ್ನು ನಿಗಧಿಪಡಿಸಲಾಗಿದ್ದು, ಈ ಅನುದಾನದ ವಿವರ, ಹಾಗೂ ನಗರ ಸ್ಥಳೀಯ ಸಂಸ್ಥೆಗಳಿಗೆ 2009–10ನೇ ಸಾಲಿನಲ್ಲಿ ಹಂಚಿಕೆ ಮಾಡಲಾಗಿರುವ 1)ಮುಕ್ತನಿಧಿ 2)ವೇತನ ಅನುದಾನ(ವಾರ್ಷಿಕ ಹಾಗೂ ಪ್ರತಿ ತಿಂಗಳ ಅನುದಾನ) ಮತ್ತು 3)ವಿದ್ಯುಚ್ಛಕ್ತಿ ಬಿಲ್ ಮೊತ್ತದ ವಿವರಗಳನ್ನು ಸಂಬಂಧಿಸಿದ ನಗರ ಸ್ಥಳೀಯ ಸಂಸ್ಥೆಗಳಿಗೆ ಲೆಕ್ಕಪತ್ರ ನಿರ್ವಹಣೆ ಹಾಗೂ ವಾರ್ಷಿಕ ಕ್ರಿಯಾಯೋಜನೆ ತಯಾರಿ ಇತ್ಯಾದಿ ಉದ್ದೇಶಗಳಿಗಾಗಿ ಮಾಹಿತಿ ಒದಗಿಸಲು ಸರ್ಕಾರವು ಉದ್ದೇಶಿಸಿದೆ. ಅದರಂತೆ ಈ ಆದೇಶ.